## ಸಸಿತೋಟ

ಲಂಡನ್‌ನ ಅಂಗಡಿಯೊಂದರಲ್ಲಿ ಮಾರಾಟಕ್ಕಿಟ್ಟ ಬೊಂಬೆಗಳಿವು. ಬ್ರಿಟನ್ ಪ್ರಧಾನಿ ತೆರೆಸಾ ಮೇ, ಮಾಜಿ ವಿದೇಶಾಂಗ ಕಾರ್ಯದರ್ಶಿ ಬೋರಿಸ್ ಜಾನ್‌ಸನ್, ಲೇಬರ್ ಪಕ್ಷದ ನಾಯಕ ಜೆರೆಮಿಯನ್ನು ಹೋಲುವ ಬೊಂಬೆಗಳಿವು. ಅದರಲ್ಲೇನು ವಿಶೇಷ ಎಂದಿರಾ? ಇವು ನಾಯಿಗಳಿಗೆ ಆಡಲು ಕೊಡುವ ಬೊಂಬೆಗಳಂತೆ. ಕೆಲವೇ ಕ್ಷಣಗಳಲ್ಲಿ ಅವುಗಳ ಹಲ್ಲಿಗೆ ಸಿಕ್ಕಿ ಚಿಂದಿಚಿತ್ರಾನ್ನವಾಗುವಂತಹವು. ಬ್ರೆಕ್ಸಿಟ್ ವಿರೋಧದ ಸೋಂಕು ಈಗ ಮನುಷ್ಯರಿಂದ ನಾಯಿಗೆ ತಗುಲಿರಬಹುದು.




ಸಾಮಾಜಿಕ ಜಾಲತಾಣದಲ್ಲಿ ಚೆಲುವೆಯೊಬ್ಬಳು ತನ್ನ ಬಾಯ್‌ಫ್ರೆಂಡ್ ಹೇಗಿರಬೇಕೆಂದು ಷರತ್ತು ವಿಧಿಸಿದ್ದಾಳಂತೆ. ಸಾಮಾಜಿಕ ಜಾಲತಾಣದಲ್ಲಿ ಇರಬಾರದು, ಬೇರೆ ಹುಡುಗಿಯರನ್ನು ನೋಡಬಾರದು, ಹುಡುಗಿಯರ ಫೋನ್ ನಂಬರ್ ಕೂಡ ಇಟ್ಟುಕೊಳ್ಳಬಾರದು, ಬೈಕ್‌ನಲ್ಲಿ ಬೇರೆ ಹುಡುಗಿಯರಿಗೆ ಡ್ರಾಪ್ ಕೊಡಬಾರದು, ಬೇರೆ ಹುಡುಗಿಯರ ಜೊತೆ ಸಿಕ್ಕಿಬಿದ್ದರೆ ಕೊಲೆ ಮಾಡಲೂ ಹಿಂಜರಿಯುವುದಿಲ್ಲ.. ಈ ತರಹದ ಷರತ್ತು ನೋಡಿದ ಬಾಯ್, ಫ್ರೆಂಡ್ ಆಗುವ ಮೊದಲೇ ಗುಡ್‌ಬೈ ಹೇಳಿಬಿಡುತ್ತಾನಷ್ಟೆ.



ಅಮೆರಿಕದಲ್ಲೀಗ ಶೌಚಾಲಯ ಶುಚಿಗೊಳಿಸುವ ಟ್ರಂಪ್ ಬ್ರಷ್‌ಗೆ ಅಪಾರ ಬೇಡಿಕೆಯಂತೆ. ಅಧ್ಯಕ್ಷ ಟ್ರಂಪ್ ಮುಖಾಕೃತಿ, ತಲೆಗೂದಲು ಹೋಲುವ ಬ್ರಷ್‌ನಿಂದಾಗಿ ಇದು ಬಿಸಿ ದೋಸೆಯಂತೆ ಖರ್ಚಾಗುತ್ತಿದೆಯಂತೆ. ನ್ಯೂಜಿಲೆಂಡ್‌ನ ಕಂಪನಿಯೊಂದು ಇದನ್ನು ಪೂರೈಸುತ್ತಿದ್ದು, ಆನ್‌ಲೈನ್‌ನಲ್ಲಿ ಪಡೆದುಕೊಳ್ಳಲು ತಿಂಗಳುಗಟ್ಟಲೆ ಕಾಯಬೇಕಂತೆ. ಬೇರೆ ಯಾವ ಅಧ್ಯಕ್ಷರೂ ಇಂತಹ ಶೌಚಾಲಯದ ಬ್ರಷ್ ಹೊಂದಿರಲಿಲ್ಲ ಎಂಬ ಟ್ರಂಪ್ ಹೆಮ್ಮೆಗೆ ಬ್ರಷ್ ಗರಿ.

ಗ್ವಾಟೆಮಾಲಾದಲ್ಲಿ ನಡೆಯುವ ಈ ಹೋಟೆಲ್ ಪರಿಚಾರಕರ ಓಟ ಅತ್ಯಂತ ಜನಪ್ರಿಯ. ಸಾವಿರಾರು ಪರಿಚಾರಕರು ಕೈಯಲ್ಲಿ ಲಘು ಪಾನೀಯ, ಬಿಯರ್ ಇರುವ ಟ್ರೇ ಹಿಡಿದು ಸಮತೋಲನ ಸಾಧಿಸುತ್ತ ಮೈಲುಗಟ್ಟಲೆ ದೂರ ಓಡುತ್ತಾರಂತೆ. ಮುಂದೆ ಗುರಿಗೆ ತಪ್ಪಿಸಿಕೊಂಡು ಓಡುವ ಗ್ರಾಹಕನಿರಬಹುದು.





ಕೆನಡಾದ ಈ ‘ದೇಸಿ ಹಿಮ ಹುಡುಗಿ’ ಯ ಚಿತ್ರ ಟ್ವಿಟರ್‌ನಲ್ಲಿ ವೈರಲ್ ಆಗಿದೆ. ಅಲ್ಲಿಯ ನಿವಾಸಿ ಬ್ರಾಂಪ್ಟನ್ ಎಂಬಾತ ನಿರ್ಮಿಸಿದ ಈ ಹಿಮ ಹುಡುಗಿ ಚಿನ್ನದ ಒಡವೆ, ಕೆಂಪು ದುಪ್ಪಟ್ಟಾದಿಂದ ಆಕರ್ಷಕವಾಗಿದ್ದು, ದೀಪಿಕಾ– ರಣವೀರ್ ಮದುವೆ ಫೋಟೋಗಳಿಗೆ ಪೈಪೋಟಿ ನೀಡುವಂತಿದೆ.

ವಾಷಿಂಗ್ಟನ್‌ನ ಉಪಾಹಾರಗೃಹವೊಂದಕ್ಕೆ ನುಗ್ಗಿದ ಅರ್ಥರ್ ಪೋಸೆ ಎಂಬಾತ ‘ನಿಮ್ಮ ಶೌಚಾಲಯವನ್ನು ಉಡಾಯಿಸಿಬಿಡುತ್ತೇನೆ’ ಎಂದು ಹೆದರಿಸಿದನಂತೆ. ನಡುಗಿಹೋದ ಮ್ಯಾನೇಜರ್ ಪೊಲೀಸರಿಗೆ ವಿಷಯ ಮುಟ್ಟಿಸಿದ. ಆರೋಪಿಯನ್ನು ಬಂಧಿಸಿ ವಿಚಾರಿಸಿದಾಗ, ತನಗೆ ಶೌಚಕ್ಕೆ ಹೋಗಲು ಅರ್ಜೆಂಟಿತ್ತು, ಶೌಚಕ್ಕೆ ಕೂತರೆ ನಿಮ್ಮ ಶೌಚಾಲಯವೇ ಸ್ಫೋಟವಾಗಿಬಿಡಬಹುದು ಎಂಬ ಅರ್ಥದಲ್ಲಿ ಹೇಳಿದೆ ಎಂದನಂತೆ. ಅಂತೂ ಅರ್ಥರ್‌ನಿಂದಾಗಿ ಶೌಚಕ್ಕೆ ಹೊಸ ಅರ್ಥ ಸೇರ್ಪಡೆಯಾಗಿದೆ.